ಈ)

ವರ್ಷ	ಬಿಡುಗಡೆ ಮಾಡಿದ ಮೊತ್ತ (ಲಕ್ಷ ರೂ.ಗಳಲ್ಲಿ)
2005–06	ಇಲ್ಲ
2006–07	125.00

746 (387) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಹೊರ ರಾಜ್ಯಕ್ಕೆ ಹೋದ "ಫ್ಯಾಬ್ ಸಿಟಿ"ಯ ನಿರ್ಮಾಣಕ್ಕಾಗಿ ನಿಗದಿ ಪಡಿಸಿದ ಜಮೀನಿನಲ್ಲಿ ಈಗ ಯಾವ ಕೈಗಾರಿಕೆಯನ್ನು ಸ್ಥಾಪಿಸಲು ಸರ್ಕಾರ ಮೀಸಲಿಡಿಸಲಾಗಿದೆ ;

ಆ) "ಫ್ಯಾಬ್ ಸಿಟಿ" ಹೊರ ರಾಜ್ಯಕ್ಕೆ ಹೋಗಲು ಕಾರಣವೇನು ;

ಇ) ಇದು ಸ್ಥಾಪನೆಯಾಗಿದ್ದಲ್ಲಿ, ಸುಮಾರು 25 ಸಾವಿರ ಜನಕ್ಕೆ ಉದ್ಯೋಗಾವಕಾಶ ದೊರಕುತ್ತಿರಲಿಲ್ಲವೆ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) "ಫ್ಯಾಬ್ ಸಿಟಿ"ಯ ನಿರ್ಮಾಣಕ್ಕಾಗಿ ನಿಗದಿಪಡಿಸಿದ ಜಮೀನಿನ ಭೂಸ್ವಾಧೀನ ಕ್ರಮ ಮುಂದುವರೆದಿದೆ. ರಾಜ್ಯ ಸರ್ಕಾರ ಫ್ಯಾಬ್ ಸಿಟಿ ಪ್ರಸ್ತಾವನೆಯನ್ನು ಬೇರೆ ಆಸಕ್ತ ಪ್ರವರ್ತಕರೊಂದಿಗೆ ಮುಂದುವರೆಸಲು ಉತ್ಸುಕರಾಗಿದ್ದು, ಈ ಬಗ್ಗೆ ಪ್ರಸ್ತಾವನೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಅ) ಕರ್ನಾಟಕ ರಾಜ್ಯ ಫ್ಯಾಬ್ ಘಟಕಗಳನ್ನು ಪ್ರೋತ್ಸಾಹಿಸಲು ವಿಶೇಷ ನೀತಿಯನ್ನು ಪ್ರಕಟಿಸಿದ್ದು, ಭಾರತ ಸರ್ಕಾರವೂ ಸಹ ಈ ಬಗ್ಗೆ ಒಂದು ವಿಶೇಷ ನೀತಿಯನ್ನು ಸಧ್ಯದಲ್ಲೇ ಹೊರಡಿಸಲಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಭಾರತದಲ್ಲಿ ಮೊದಲ ಫ್ಯಾಬ್ ಸಿಟಿ ಸ್ಥಾಪಿಸಲು ಮುಂದೆ ಬಂದಿದ್ದ ಒಂದು ವಿದೇಶಿ ಕಂಪನಿ ಹೊರ ರಾಜ್ಯದಲ್ಲಿ ಸ್ಥಾಪಿಸಲು ನಿರ್ಧರಿಸಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದ್ದು ಅದು ಆ ಕಂಪನಿಯ ನಿರ್ಧಾರವಾಗಿರುತ್ತದೆ.

ಇ) ಹೌದು. (ಯೋಜನಾ ಪ್ರವರ್ತಕರ ಅಂದಾಜಿನಂತೆ). ಇಲ್ಲಿ ಫ್ಯಾಬ್ ಸಿಟಿ ಅಥವಾ ಇತರೇ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದ್ದು ಹಾಗೆ ಸ್ಥಾಪನೆಯಾದ ನಂತರ ಉದ್ದೇಶಿತ ಉದ್ಯೋಗಾವಕಾಶ ದೊರೆಯುತ್ತದೆ.